





ಈಗಲೂ ನೋಡಬಹುದು.

ಪರಂಪರೆಯ ಉಸಿರಾಟವನ್ನು ಕೇಳಿಸಿಕೊಳ್ಳಲು ಬಯಸುವ ಕುತೂಹಲಿಗಳಿಗೆ ಅಗಸ್ಟಸ್‌ನಲ್ಲಿ ನೋಡಲಿಕ್ಕೆ ಸಾಕಷ್ಟು ಸ್ಥಳಗಳಿವೆ. ಸೇನಾಪಾಳ್ಯದ ನಾಯಕರ ಹಳೆಯ ಮನೆ, ಪೆಪ್ಪರ್–ಪಾಟ್ ಲೈಟ್ ಹೌಸ್, 5 ಲಾಕ್ ಗೇಟ್‌ಗಳು, ತಿರುಗು ಸೇತುವೆ, ಬ್ರಿಟಿಷ್ ವಾಟರ್‌ವೇಸ್‌ನ ಪಾರಂಪಾರಿಕ ಕೇಂದ್ರ, ವಿಕ್ಟೋರಿಯ ರಾಣಿಯ ವಜ್ರಮಹೋತ್ಸವ ಕಾರಂಜಿ, ಮದ್ದಿನ ಉಗ್ರಾಣ, ಇತ್ಯಾದಿ ಚಾರಿತ್ರಿಕ ತಾಣಗಳು ಇಲ್ಲಿವೆ. ಪ್ರತಿಯೊಂದು ಸ್ಥಳದ ಜೊತೆಗೆ ಬೆಸೆದುಕೊಂಡ ಅದರದ್ದೇ ಆದ ಕಥೆಗಳು. ಐದು ಶತಮಾನಗಳ ಹಿಂದೆ ಈ ಪ್ರದೇಶದಲ್ಲಿ ಪ್ರಚಲಿತವಿದ್ದ ಜೀವನಕ್ರಮವನ್ನು ಕ್ಲಾನ್ಸ್‌ಮನ್ ಕೇಂದ್ರದಲ್ಲಿ ಪರಿಚಯಿಸಿಕೊಳ್ಳಲಿಕ್ಕೆ ಅವಕಾಶವಿದೆ.

## ರಮಣೀಯ ನೌಕಾವಿಹಾರ

ಇಲ್ಲಿ ಕುಳಿತುಕೊಂಡು ಲಾಕ್ ಗೇಟುಗಳ ಮೂಲಕ ನಾವೆಗಳು ಸಾಗುವ ಅಪರೂಪದ ದೃಶ್ಯವನ್ನು ನೋಡಬಹುದು. ಕೆಲೆಡೋನಿಯಲ್ ಕಾಲುವೆಯ ಪಾರಂಪಾರಿಕ ಕೇಂದ್ರಕ್ಕೆ ಭೇಟಿ ನೀಡಿ ವಿವರವಾದ ಮಾಹಿತಿ ಪಡೆಯಬಹುದು. ಸನಿಹದಲ್ಲಿರುವ ಹೋಟೆಲುಗಳಲ್ಲಿ ಪ್ರಿಯವಾದ ತಿಂಡಿ ತಿನಿಸು ಸೇವಿಸಬಹುದು. ಒಮ್ಮೊಮ್ಮೆ, ತಿರುಗು ಸೇತುವೆ ಕಾರ್ಯನಿರ್ವಹಿಸುವುದನ್ನೂ ಕಾಣಬಹುದು. ಇದಾವುದನ್ನು ಅನುಭವಿಸದಿದ್ದರೂ ನಡೆಯುತ್ತದೆ. ಆದರೆ, ವಿಹಾರ ನೌಕಾಯಾನದಲ್ಲಿ ಲಾಕ್ಸ್ ನೆಸ್‌ನ ರಮಣೀಯ ಸೌಂದರ್ಯ ಕಣ್ತುಂಬಿಸಿಕೊಳ್ಳುವುದನ್ನು ಮಾತ್ರ ತಪ್ಪಿಸಬಾರದು.

ಸ್ಕಾಟ್ಲೆಂಡ್‌ನ ಎರಡನೆಯ ಅತಿ ದೊಡ್ಡ ಸರೋವರ ಎನಿಸಿಕೊಂಡಿರುವ ಲಾಕ್ಸ್ ನೆಸ್ 37 ಕಿ.ಮೀ. ಉದ್ದ ಹಾಗು 56 ಚ.ಕಿ.ಮೀ. ವಿಸ್ತಾರ ಹೊಂದಿದೆ. ಇದೊಂದು ನೈಸರ್ಗಿಕ ಕೊಳ. ಲಾಕ್ಸ್ ನೆಸ್‌ನಲ್ಲಿ 'ನೆಸ್ಸಿ' ಎಂದು ಕರೆಯಲಾಗುವ ದೈತ್ಯಜೀವಿ ಇತ್ತಂತೆ. ಈ ಕುರಿತು ರಂಗು ರಂಗಿನ ರೋಚಕ ಕತೆಗಳಿವೆ. ಇಂತಹ ಕೆಲವು ಕತೆಗಳನ್ನು ಹೇಳಿ ಪ್ರವಾಸಿಗರನ್ನು ರಂಜಿಸಲು ಗೈಡ್ ಪ್ರಯತ್ನಿಸಿದರು. ಆದರೆ 'ನೆಸ್ಸಿ' ಮಾತ್ರ ತನ್ನ ಅನುಪಸ್ಥಿತಿಯಿಂದ ಎಲ್ಲರನ್ನೂ ನಿರಾಸೆಗೊಳಿಸಿತು.

ನೀರಿನ ಕಪ್ಪು ಬಣ್ಣದಿಂದಾಗಿ ಕೊಳದಲ್ಲಿರಬಹುದಾದ ಜಲಚರಗಳು ಹಾಗು ವಸ್ತುಗಳು ಸುಲಭದಲ್ಲಿ ಗೋಚರಿಸುವುದಿಲ್ಲ. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಇವುಗಳನ್ನು ಗುರ್ತಿಸಿ, ಸಂಶೋಧನೆಗಳನ್ನು ನಡೆಸಲಾಗುತ್ತದೆ. ಆ ಕುರಿತು ಚಿತ್ರಸಹಿತ ಮಾಹಿತಿ ನೀಡುವ ವ್ಯವಸ್ಥೆಯೂ ನೌಕೆಯಲ್ಲಿತ್ತು.